(INTERRUPTION)

ಶ್ರೀ ವಾಟಾಳ್ ನಾಗರಾಜ್:- ಇದು ರೆಕಾರ್ಡ್‌ಗೆ ಹೋಗಬೇಕೇ? ಇದನ್ನು ನಾನು ಒಪ್ಪುವುದಿಲ್ಲ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

SRI B.I. PATIL:- We have got right. For that purpose people have elected us.

(INTERRUPTION)

ಶ್ರೀ ಚಂದ್ರಕಾಂತ್ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, ಅವರು ಸತತವಾಗಿ ಈ ಸದನದಲ್ಲಿ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಬೆಳಗಾಂ ಅನ್ನು ಮಹಾರಾಷ್ಟ್ರಕ್ಕೆ ಸೇರಿಸಬೆಕು ಎನ್ನತಕ್ಕ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು:- ನಾನು ರೆಕಾರ್ಡ್ಸ್ ತರಿಸಿ ನೋಡುತ್ತೇನೆ. ದಯಮಾಡಿ ಕೇಳಿ ಈ ಸದನ ಈ ವಿಚಾರಕ್ಕೆ ಸಂಬಂಧಿಸಿದಂತೆ ಈ ರಾಜ್ಯ ಸರ್ಕಾರಗಳು ಈ ಹಿಂದೆ, ಈಗಾಗಲೇ ಒಂದು ಖಚಿತವಾದ ನಿಲುವನ್ನು ತಾಳಿವೆ. ಒಂದು ನಿರ್ಣಯ ತೆಗೆದುಕೊಂಡಿದೆ. ಅದರ ಬಗ್ಗೆ ಬೇರೆ ಚರ್ಚೆ ಅನಾವಶ್ಯಕ. ಯಾವ ನಿಲುವನ್ನು ಈ ಸದನ ಈ ಹಿಂದೆ ತಾಳಿದೆ, ಆ ನಿಲುವಿಗೆ ನಾನು ತಾವು ಎಲ್ಲರೂ ಬದ್ದರು. ಇಡೀ ಸದನ ಬದ್ಧ. ಅವರು ಹೇಳತಕ್ಕ ಸನ್ನಿವೇಶದಲ್ಲಿ ಹಿಂದೆ ಈ ಸದನ ತಾಳಿರತಕ್ಕ ನಿಲುವಿಗೆ ವಿರುದ್ಧವಾದಂತಹ ಯಾವುದೇ ಮಾತು ಹೇಳಿದರೂ ಕೂಡ ಅದು ಕಡತದಲ್ಲಿರುವುದಿಲ್ಲ. ಆದರೆ ಅವರಿಗೆ ಮಾತನಾಡಲು, ಅವರು ಏನು ಹೇಳುತ್ತಾರೆಂದು ಕೇಳಲು ನಾನು ಅವಕಾಶ ಕೊಡಬೇಕಲ್ಲ. ಈಗ ಅವರು ಆ ವಿಚಾರವನ್ನು ಬಿಟ್ಟು ಬೇರೆ ಏನಾದರೂ ಹೇಳಿದರೆ, ಅದು ಇರುತ್ತದೆ. ಒಂದು ವೇಳೆ ಈ ಸದನ ಈಗಾಗಲೇ ಒಂದು ನಿರ್ಣಯಕ್ಕೆ ಬಂದಿದೆ. ಬೆಳಗಾವಿ ನಮ್ಮ ಭಾಗ. ಯಾವ ಕಾರಣಕ್ಕೂ ನಾವು ಬಿಡುವುದಿಲ್ಲ ಎಂದು ಈ ಸದನ ಈಗಾಗಲೇ ತೀರ್ಮಾನ ಮಾಡಿದೆ. ಸದನದಲ್ಲಿ ನಿರ್ಣಯಗಳು ಆಗಿವೆ ನಾನ್ಯಾರು ಅದನ್ನು ಬದಲಾಯಿಸುವುದಕ್ಕೆ? ನಾನೇನು ಹೇಳುತ್ತಿದ್ದೇನೆಂದರೆ ಅವರು ಮಾತನಾಡತಕ್ಕ ಅವಧಿಯೊಳಗೆ ಅದಕ್ಕೆ ವಿರುದ್ಧವಾದ ಯಾವುದೇ ಮಾತು ಬಂದರೂ ಕೂಡ ಅದನ್ನು ನಾನು ಕಡತದಲ್ಲಿ ಹೋಗುವುದಕ್ಕೆ ಬಿಡುವುದಿಲ್ಲ. ಪತ್ರಿಕೆಯವರಿಗೂ ಅಚ್ಚು ಮಾಡಬಾರದು ಎಂದು ಹೇಳುತ್ತೇನೆ. ಆದರೆ ಅವರು ಈ ಸದನಕ್ಕೆ ಆರಿಸಿ ಬಂದಿರುವ ಸದಸ್ಯರು. ಅವರು ಏನು ಹೇಳುತ್ತಾರೋ ಅದಕ್ಕೆ ಅವಕಾಶ ಕೊಡುತ್ತೇನೆ. ಅವರು ಅದಲ್ಲದೇ ಬೇರೆ ವಿಚಾರ ಹೇಳಿದರೆ ರೆಕಾರ್ಡ್‌ನಲ್ಲಿರುತ್ತದೆ. ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದರೆ,- ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ದಯಮಾಡಿ ನನ್ನಲ್ಲಿ ತಾವು ವಿಶ್ವಾಸವನ್ನು ಇಡಬೇಕು. ಅವರು